# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 960(962) |
| ಉತ್ತರಿಸಬೇಕಾದ ದಿನಾಂಕ | 25.08.2026 |
| ಉತ್ತರಿಸುವ ಸಚಿವರು | ನಗರಾಭಿವೃದ್ಧಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಅನುದಾನ ನಿಗದಿಪಡಿಸುವಾಗ ಜನಸಂಖ್ಯೆ, ವಿಸ್ತೀರ್ಣ ಒಳಚರಂಡಿ ಜಾಲದ ವ್ಯಾಪ್ತಿ, ಪ್ರಸ್ತುತ ಸಂಪರ್ಕಗಳ ಸಂಖ್ಯೆ, ಭೌಗೋಳಿಕ ಪರಿಸ್ಥಿತಿ ಮಳೆಯ ಪ್ರಮಾಣ ಒಳಚರಂಡಿ ಉತ್ಪಾದನೆ STP ಸಾಮರ್ಥ್ಯ ಹಾಗೂ ನಗರಾಭಿವೃದ್ಧಿ ಯೋಜನೆಗಳ ಆಧಾರದ ಮೇಲೆ ಯಾವ ಮಾನದಂಡಗಳನ್ನು<br>ಅನುಸರಿಸಲಾಗುತ್ತಿದೆ. ಅನುದಾನ ಹಂಚಿಕೆಯ ವಿವರ ನೀಡುವುದು;</td><td>ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆ (Underground Drainage/UGD) ಯೋಜನೆಯನ್ನು ವಿನ್ಯಾಸಗೊಳಿಸುವಾಗ CPHEEO – Central Public Health and Environmental Engineering Organisation ಹೊರಡಿಸಿರುವ Manual on Sewerage and Sewage Treatment Systems ಮಾರ್ಗಸೂಚಿಗಳನ್ನು ಅನುಸರಿಸಿ ಈ ಕೆಳಗಿನ ಅಂಶಗಳೊಂದಿಗೆ ವಿಸ್ತೃತ ಯೋಜನಾ ವರದಿಗಳನ್ನು(DPR) ತಯಾರಿಸಲಾಗುತ್ತದೆ.<br><br>1. ವಿನ್ಯಾಸ ಅವಧಿ (Design Period)
<table>
<tr><th>ಘಟಕ</th><th>ವಿನ್ಯಾಸ ಅವಧಿ</th></tr>
<tr><td>ಒಳಚರಂಡಿ ಜಾಲ ಹಾಗೂ ಬಳಸಿದ ನೀರು ಶುದ್ಧೀಕರಣ ಘಟಕ</td><td>30ವರ್ಷ</td></tr>
<tr><td>ಪಂಪಿಂಗ್ ಮೆಶಿನರಿ</td><td>15 ವರ್ಷ</td></tr>
</table>
2. ಜನಸಂಖ್ಯೆಯ ಅಂದಾಜು<br>ಜನಸಂಖ್ಯೆಯನ್ನು ಸಾಮಾನ್ಯವಾಗಿ Arithmetic Increase Method, Geometric Increase Method, Incremental Increase Method ಹಾಗೂ Graphical Method ಬಳಸಿ ಅಂದಾಜಿಸಲಾಗುತ್ತದೆ.<br>3. ಬಳಸಿದ ನೀರಿನ ಪ್ರಮಾಣ<br>CPHEEO ಮಾರ್ಗಸೂಚಿಗಳ ಪ್ರಕಾರ ನೀರಿನ ಬಳಕೆಯಲ್ಲಿನ ಒಂದು ಭಾಗವು ಒಳಚರಂಡಿಗೆ ಸೇರುತ್ತದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ 135 LPCD ಪ್ರಮಾಣದಲ್ಲಿ ನೀರು ಸರಬರಾಜು ಮಾಡಲಾಗುವುದರಿಂದ ಮನೆಬಳಕೆಯಿಂದ ಉತ್ಪನ್ನವಾಗುವ ಬಳಸಿದ ನೀರಿನ ಪ್ರಮಾಣವನ್ನು ಸರಬರಾಜು ಮಾಡಲಾಗುವ ನೀರಿನ ಶೇ. 80ರಂತೆ ಸುಮಾರು 108 LPCD ಎಂದು ಪರಿಗಣಿಸಲಾಗುತ್ತದೆ. ಇದರೊಂದಿಗೆ Peak factor ಜನಸಂಖ್ಯೆ/ಸರಾಸರಿ ಹರಿವಿನ ಪ್ರಮಾಣಕ್ಕೆ ಅನುಗುಣವಾಗಿ CPHEEO ಮಾರ್ಗಸೂಚಿಯಂತೆ ಆಯ್ಕೆ ಮಾಡಲಾಗುತ್ತದೆ.<br>4. ಒಳಚರಂಡಿ ಜಾಲದ ವಿನ್ಯಾಸ<br>ಒಳಚರಂಡಿ ಜಾಲದ ವಿನ್ಯಾಸವನ್ನು gravity flow ಆಧಾರದ ಮೇಲೆ ವಿನ್ಯಾಸಗೊಳಿಸಲಾಗುತ್ತದೆ. ಪ್ರಮುಖವಾಗಿ Pipe diameter, Design discharge,Gradient/slope,Velocity, Hydraulic capacity, Self-cleansing velocity, Maximum permissible velocity, Pipe material, Ground conditions Groundwater level ಅಂಶಗಳನ್ನು ಪರಿಶೀಲಿಸಲಾಗುತ್ತದೆ.<br>ಸ್ಥಳೀಯ ಸಂಸ್ಥೆಯ ವಿಸ್ತೀರ್ಣ ಮತ್ತು</td></tr>
</table>

ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ ಈಗಾಗಲೇ ಒಳಚರಂಡಿ ವ್ಯವಸ್ಥೆಯನ್ನು ಹೊಂದಿರುವ ಪ್ರದೇಶ, ಭವಿಷ್ಯದಲ್ಲಿ ಅಭಿವೃದ್ಧಿ ಹೊಂದುವ ಪ್ರದೇಶಗಳು, ಜನದಟ್ಟಣೆಯನ್ನು ಹಾಗೂ built-up areaದ ಆಧಾರದ ಮೇಲೆ ಒಳಚರಂಡಿ ಜಾಲದ ಉದ್ದವನ್ನು ನಿರ್ಧರಿಸಲಾಗುತ್ತದೆ. ಅದರಂತೆ ಒಳಚರಂಡಿ ಜಾಲದ Trunk sewer, Secondary sewer, tertiary sewer, ಏರುಕೊಳವೆ ಮಾರ್ಗ, ಗೃಹ ಸಂಪರ್ಕಗಳು, ಮಶಿನ್ ಹೋಲ್ ಗಳು ಹಾಗೂ ಭೌಗೋಳಿಕ ಸ್ಥಿತಿಗಳಿಗನುಸಾರವಾಗಿ Gravity system ಮೂಲಕ sewage ಹರಿಸುವುದು ಸಾಧ್ಯವಾಗದ ಪ್ರದೇಶಗಳಲ್ಲಿ ವೆಟ್ ವೆಲ್ ಕಂ ಪಂಪ್ ಹೌಸ್ ಗಳನ್ನು ಅಳವಡಿಸಲು ಅನುವು ಮಾಡಲಾಗುತ್ತದೆ.

6. **ಮಳೆಯ ಪ್ರಮಾಣ**
   ನಗರ ಸ್ಥಳೀಯ ಸಂಸ್ಥೆಗಳ ಒಳಚರಂಡಿ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಮನೆಬಳಕೆಯಿಂದ ಉತ್ಪನ್ನವಾಗುವ ಬಳಸಿದ ನೀರನ್ನು ಸಂಸ್ಕರಿಸಲು ವಿನ್ಯಾಸಿಸಲಾಗಿರುವುದರಿಂದ ಮಳೆನೀರು ನೇರವಾಗಿ ಒಳಚರಂಡಿ ವ್ಯವಸ್ಥೆಗೆ ಸೇರದಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಮಳೆನೀರು ತೆರೆದ ಚರಂಡಿಗಳ ಮೂಲಕ ಹೊರ ಹರಿಸುವುದರಿಂದ ಒಳಚರಂಡಿ ವ್ಯವಸ್ಥೆಗೆ ಸೇರುವುದನ್ನು ತಡೆಗಟ್ಟಬಹುದಾಗಿರುತ್ತದೆ. ಆದಾಗ್ಯೂ, ಒಳಚರಂಡಿ ಜಾಲ ಮತ್ತು ಮಶಿನ್ ಹೋಲ್ ಗಳಲ್ಲಿ ಮಳೆನೀರು ಹರಿಯುವ ಸಾಧ್ಯತೆಯನ್ನು ಪರಿಗಣಿಸಿ ಶೇ. 10ರಷ್ಟು infiltration ಪ್ರಮಾಣವನ್ನು ಸೇರಿಸಿ ಒಳಚರಂಡಿ ಜಾಲವನ್ನು ವಿನ್ಯಾಸಿಸಲಾಗುತ್ತದೆ.
7. **ಬಳಸಿದ ನೀರು ಶುದ್ಧೀಕರಣ ಘಟಕದ ಸಾಮರ್ಥ್ಯ**
   ಬಳಸಿದ ನೀರು ಶುದ್ಧೀಕರಣ ಘಟಕದ ಸಾಮರ್ಥ್ಯವನ್ನು ಸಾಮಾನ್ಯವಾಗಿ design-year sewage flow ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.
   ಬಳಸಿದ ನೀರು ಶುದ್ಧೀಕರಣ ಘಟಕದ ವಿನ್ಯಾಸದಲ್ಲಿ Average flow, Peak flow, BOD, COD, TSS, Nitrogen, Phosphorus, Influent characteristics ಮತ್ತು ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿರುವ Treated effluent standards ಇವುಗಳನ್ನು ಪರಿಗಣಿಸಲಾಗುತ್ತದೆ. ಮುಂದುವರೆದು, ಬಳಸಿದ ನೀರು ಶುದ್ಧೀಕರಣ ಘಟಕದ ತಂತ್ರಜ್ಞಾನವನ್ನು ಆಯ್ಕೆ ಮಾಡಲು sewage characteristics, land availability, power requirement, O&M capability, treated water reuse ಮತ್ತು statutory discharge standards ಆಧಾರದ ಮೇಲ ಆಯ್ಕೆ ಮಾಡಲಾಗುತ್ತದೆ.

**ಅನುದಾನ ಹಂಚಿಕೆಯ ವಿವರ:**

ಈ ಮೇಲೆ ತಿಳಿಸಿರುವ ಅಂಶಗಳನ್ನು ಅನುಸರಿಸಿ ತಯಾರಿಸಲಾಗುವ ಒಳಚರಂಡಿ ವ್ಯವಸ್ಥೆಯ ವಿಸ್ತೃತ ಯೋಜನಾ ವರದಿಗೆ (DPR) ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಸರ್ಕಾರದ ಆದೇಶ ಸಂಖ್ಯೆ: ನಅಇ 07 ಯುಡಬ್ಲ್ಯೂ ಎಸ್ 2011 ದಿನಾಂಕ: 27.02.2011ರನ್ವಯ ಒಳಚರಂಡಿ ಯೋಜನೆಗಳಿಗೆ ಈ ಕೆಳಗಿನ ಆರ್ಥಿಕ ಮಾದರಿಯನ್ನು ಪಾಲಿಸಲಾಗುತ್ತದೆ:

| ಕ್ರ. ಸಂ | ಪ್ರವರ್ಗ | ಸರ್ಕಾರದ ಅನುದಾನ | ಆರ್ಥಿಕ ಸಂಸ್ಥೆಗಳಿಂದ ಸಾಲ | ಸ್ಥಳೀಯ ಸಂಸ್ಥೆಗಳ ಪಾಲು |
|---|---|---|---|---|
| 1) | ಮಹಾನಗರಪಾ | 50% | 35% | 15% |

| | | | | |
|---|---|---|---|---|
| | ಲಿಕೆಗಳು | | | |
| 2) | ನಗರಸಭೆಗಳು | 70% | 20% | 10% |
| 3) | ಪುರಸಭೆಗಳು | 75% | 20% | 5% |
| 4) | ಪಟ್ಟಣ ಪಂಚಾಯತಿಗಳು | 95% | - | 5% |

**ಆ** ಕುಂದಾಪುರ ಪುರಸಭೆ ವ್ಯಾಪ್ತಿಯ ಒಳಚರಂಡಿ ಯೋಜನೆಗೆ DPR ತಯಾರಿಸಲಾಗಿದೆಯೇ; ಯೋಜನೆಯ ಮೂಲ ಅಂದಾಜು ವೆಚ್ಚ; ವಿನ್ಯಾಸ ಸಾಮರ್ಥ್ಯ; ಒಳಚರಂಡಿ ಜಾಲದ ಉದ್ದ; ಪ್ರಸ್ತಾವಿತ ಸಂಪರ್ಕಗಳ ಸಂಖ್ಯೆ; ಪಂಪಿಂಗ್ ಸ್ಟೇಷನ್ ಗಳು ಹಾಗೂ STP ಸಾಮರ್ಥ್ಯ ಎಷ್ಟಿದೆ; DPR ಗೆ ತಿದ್ದುಪಡಿ ಮಾಡಲಾಗಿದೆಯೇ; ಮಾಡಿದ್ದರೆ ಕಾರಣಗಳೇನು;

ಕೇಂದ್ರ ಪುರಸ್ಕೃತ UIDSSMT ಯೋಜನೆಯಡಿ ಕುಂದಾಪುರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ರೂ.4814.15 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ: ಯು.ಡಿ.ಡಿ/35/ಸಿ.ಎಸ್.ಎಸ್/2014, ದಿನಾಂಕ:14.05.2014ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

**ಅನುಮೋದಿತ ಅಂದಾಜು ಪಟ್ಟಿಯ ವಿವರಗಳು ಕೆಳಗಿನಂತಿವೆ;**

- ಅಂದಾಜು ಮೊತ್ತ ರೂ.4814.15 ಲಕ್ಷಗಳು + ಹೆಚ್ಚುವರಿ ಅನುದಾನ ರೂ.840.00 ಲಕ್ಷಗಳು ಸೇರಿದಂತೆ ಒಟ್ಟು ರೂ.5654.15 ಲಕ್ಷಗಳು.
- **ವಿನ್ಯಾಸ ಸಾಮರ್ಥ್ಯ:**
  ಮೂಲ ವರ್ಷ: 2015 - 3.39 MLD ಸಾಮರ್ಥ್ಯ
  ಮಧ್ಯಂತರ ವರ್ಷ: 2030 - 3.50 MLD ಸಾಮರ್ಥ್ಯ
  ಅಂತಿಮ ವರ್ಷ: 2045 – 3.63 MLD ಸಾಮರ್ಥ್ಯ
- **ಒಳಚರಂಡಿ ಜಾಲದ ಉದ್ದ:**
  ಒಳಚರಂಡಿ ಜಾಲ : 39. 50ಕಿ.ಮೀ
  ಏರುಕೊಳವೆ ಮಾರ್ಗ: 5.40 ಕಿ.ಮೀ
- **ಪ್ರಸ್ತಾವಿತ ಸಂಪರ್ಕಗಳ ಸಂಖ್ಯೆ:**
  6000
- **ಪಂಪಿಂಗ್ ಸ್ಟೇಷನ್ ಗಳು:**
  ಒಟ್ಟು 5 ವೆಟ್ ವೆಲ್ ಕಂ ಪಂಪ್ ಹೌಸ್ ಗಳನ್ನು ನಿರ್ಮಿಸಿ lean flow, average flow ಮತ್ತು peak flowಗೆ ಅನುಗುಣವಾಗಿ ಈ ಕೆಳಗಿನಂತೆ ಪಂಪಿಂಗ್ ಮೆಶಿನರಿಗಳನ್ನು ಅಳವಡಿಸಲು ಅನುವು ಮಾಡಲಾಗಿರುತ್ತದೆ:

| | |
|---|---|
| ವಲಯ-1, 2, 4, 5 ಮತ್ತು 7 ರ ವೆಟ್ ವೆಲ್ ಕಂ ಪಂಪ್ ಹೌಸ್ | 2 ಸಂಖ್ಯೆ 5 HP ಮತ್ತು 2 ಸಂಖ್ಯೆ 10HP submersible sewage pumpsets |
| | 3 6 HP ಮತ್ತು 2 ಸಂಖ್ಯೆ 60HP submersible sewage pumpsets |
| | 4 ಸಂಖ್ಯೆ 5 HP submersible sewage pumpsets |
| | 3 ಸಂಖ್ಯೆ 5 HP ಮತ್ತು 2 ಸಂಖ್ಯೆ 40HP submersible sewage pumpsets |
| | 3 ಸಂಖ್ಯೆ 7.50 HP ಮತ್ತು 2 ಸಂಖ್ಯೆ 75HP submersible sewage pumpsets |

- **ಬಳಸಿದ ನೀರು ಶುದ್ಧೀಕರಣ ಘಟಕಗಳ ಸಾಮರ್ಥ್ಯ**
  ಒಳಚರಂಡಿ ಯೋಜನೆಯಡಿ ಒಟ್ಟು 3 ಬಳಸಿದ ನೀರು ಶುದ್ಧೀಕರಣ ಘಟಕಗಳಿಗೆ ಅನುವು ಮಾಡಲಾಗಿರುತ್ತದೆ.
  1) 2.80 MLD SBR ಮಾದರಿಯ ಬಳಸಿದ ನೀರು ಶುದ್ಧೀಕರಣ ಘಟಕ
  2) ವಲಯ -3ರಲ್ಲಿ 0.135 MLD SBR ಮಾದರಿಯ ಬಳಸಿದ ನೀರು ಶುದ್ಧೀಕರಣ ಘಟಕ
  3) ವಲಯ -6ರಲ್ಲಿ 0.07 MLD SBR ಮಾದರಿಯ ಬಳಸಿದ ನೀರು ಶುದ್ಧೀಕರಣ ಘಟಕ

SBM 2.0 ಯೋಜನೆಯಡಿ 4.65 MLD ಸಾಮರ್ಥ್ಯದ ಬಳಸಿದ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಲು ಅಂದಾಜು ಮೊತ್ತ ರೂ. 1550.42 ಲಕ್ಷಗಳಿಗೆ ಅನುಮೋದನೆ ನೀಡಲಾಗಿದ್ದು, ನೋಡಲ್ ಸಂಸ್ಥೆಯಾದ KUIDFC ವತಿಯಿಂದ ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿರುವುದರಿಂದ UIDSSMT ಯೋಜನೆಯಡಿ ಅನುವು ಮಾಡಲಾಗಿದ್ದ 2.80 MLD SBR ಮಾದರಿಯ ಬಳಸಿದ ನೀರು ಶುದ್ಧೀಕರಣ ಘಟಕ ನಿರ್ಮಾಣದ ಕಾಮಗಾರಿಯನ್ನು ಕೈಬಿಡಲಾಗಿದೆ. ಉಳಿದಂತೆ ಅನುಮೋದಿತ UIDSSMT ಯೋಜನೆಯಡಿ

<table>
<tr><td></td><td></td><td>ಅನುವು ಮಾಡಿರುವಂತೆ ವಲಯ -3ರಲ್ಲಿ 0.135 MLD ಮತ್ತು ವಲಯ -6ರಲ್ಲಿ 0.07 MLD SBR ಮಾದರಿಯ ಬಳಸಿದ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನಗೊಳಿಸಲಾಗುವುದು.</td></tr>
<tr><td>ಇ</td><td>ಈ ಯೋಜನೆಗೆ ಈವರೆಗೆ ಆಡಾಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದ ಮೊತ್ತವೆಷ್ಟು; ಬಿಡುಗಡೆಯಾದ, ಖರ್ಚಾದ, ಬಳಕೆಯಾಗದೇ ಉಳಿದ ಹಾಗೂ ಬಾಕಿ ಇರುವ ಅನುದಾನದ ವಿವರವೇನು;</td><td>ಯೋಜನೆಗೆ ಈವರೆಗೆ ಆಡಾಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದ ಮೊತ್ತ, ಬಿಡುಗಡೆಯಾದ, ಖರ್ಚಾದ, ಬಳಕೆಯಾಗದೇ ಉಳಿದ ಹಾಗೂ ಬಾಕಿ ಇರುವ ಅನುದಾನದ ವಿವರ ಕೆಳಗಿನಂತಿದೆ:<br>ರೂ. ಲಕ್ಷಗಳಲ್ಲಿ
<table>
<tr><th>ಆಡಳಿತಾತ್ಮಕ ಅನುಮೋದನ ಮೊತ್ತ</th><th>ತಾಂತ್ರಿಕ ಮಂಜೂರಾತಿ ಮೊತ್ತ</th><th>ಬಿಡುಗಡೆ ಯಾದ ಮೊತ್ತ</th><th>ಖರ್ಚಾದ ಮೊತ್ತ</th><th>ಬಳಕೆಯಾಗದ ಉಳಿದ ಮೊತ್ತ</th><th>ಬಿಡುಗಡೆ ಯಾಗ ಬೇಕಿರುವ ಬಾಕಿ ಅನುದಾನ ಮೊತ್ತ</th></tr>
<tr><td>4814.15</td><td>4814.15</td><td>4183.32</td><td>2619.61</td><td>1363.00</td><td>630.83</td></tr>
</table></td></tr>
<tr><td>ಈ</td><td>DPR ನಲ್ಲಿ ನಿಗದಿಪಡಿಸಿದಂತೆ ಕಾಮಗಾರಿ ಭೌತಿಕ ಹಾಗೂ ಆರ್ಥಿಕ ಪ್ರಗತಿ ಸಾಧಿಸಿದೆಯೇ; ಪೂರ್ಣಗೊಂಡ ಮತ್ತು ಬಾಕಿ ಇರುವ ಕಾಮಗಾರಿಗಳ ಪ್ರಮಾಣ, ವಿಳಂಬಕ್ಕೆ ಕಾರಣಗಳು ಹಾಗೂ ಪರಿಷ್ಕೃತ ವೆಚ್ಚವೆಷ್ಟು;</td><td>ಯೋಜನೆಯಡಿ ವಿವಿಧ ಘಟಕಗಳಿಗೆ ಅಗತ್ಯವಿದ್ದ ಜಾಗಗಳನ್ನು ಪುರಸಭೆ ವತಿಯಿಂದ ಮಂಡಳಿಗೆ ಹಸ್ತಾಂತರಿಸುವಲ್ಲಿ ವಿಳಂಬವಾಗಿರುವುದರಿಂದ, DPR ನಲ್ಲಿ ನಿಗದಿಪಡಿಸಿದಂತೆ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಗಳಿಸಲು ಸಾಧ್ಯವಾಗಿರುವುದಿಲ್ಲ.<br>ಸದರಿ ಯೋಜನೆಯಡಿ ಪೂರ್ಣಗೊಂಡ ಮತ್ತು ಬಾಕಿ ಇರುವ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.</td></tr>
<tr><td>ಉ</td><td>ಬಾಕಿ ಕಾಮಗಾರಿ ಪೂರ್ಣಗೊಳಿಸಲು ಅಗತ್ಯವಿರುವ ಹೆಚ್ಚುವರಿ ಅನುದಾನ, ಪರಿಷ್ಕೃತ DPR, ಟೆಂಡರ್ /ಗುತ್ತಿಗೆ ಸ್ಥಿತಿ ಇತ್ಯಾದಿಗಳ ಹಿನ್ನೆಲೆಯಲ್ಲಿ ಕುಂದಾಪುರ ಪುರಸಭೆಯ ಸಂಪೂರ್ಣ ಒಳಚರಂಡಿ ವ್ಯವಸ್ಥೆಯನ್ನು ಯಾವ ಕಾಲಮಿತಿಯೊಳಗೆ ಕಾರ್ಯಗತಗೊಳಿಸಲಾಗುವುದು;</td><td>
<table>
<tr><th>ಕ್ರ.ಸಂ.</th><th>ಘಟಕ</th><th>ಅನುವು</th><th>ಪೂರ್ಣಗೊಂಡಿರುವ ಕಾಮಗಾರಿ</th><th>ಬಾಕಿ ಕಾಮಗಾರಿ</th></tr>
<tr><td>1</td><td>ಆಂತರಿಕ ಒಳಚರಂಡಿ ಕೊಳವೆ ಮಾರ್ಗ</td><td>39.50 ಕಿ.ಮೀ</td><td>31.50 ಕಿ.ಮೀ</td><td>8.00 ಕಿ.ಮೀ.</td></tr>
<tr><td>2</td><td>ಮೆಷಿನ್ ಹೋಲ್ ಗಳು</td><td>1485</td><td>1160</td><td>325</td></tr>
<tr><td>3</td><td>ಗೃಹ ಸಂಪರ್ಕಗಳು</td><td>6000</td><td>1650</td><td>4350</td></tr>
<tr><td>4</td><td>ವೆಟ್‌ವೆಲ್ ಗಳು ಮತ್ತು ಪಂಪಿಂಗ್ ಮಷಿನರಿಗಳು</td><td>5</td><td>--</td><td>5</td></tr>
<tr><td>5</td><td>ಏರು ಕೊಳವೆ ಮಾರ್ಗ</td><td>5.40 ಕಿ.ಮೀ</td><td>2.30 ಕಿ.ಮೀ</td><td>3.10 ಕಿ.ಮೀ.</td></tr>
<tr><td>6</td><td>ಬಳಸಿದ ನೀರು ಶುದ್ಧೀಕರಣ ಘಟಕಗಳು</td><td>3 (2.80 MLD, 0.135 MLD 0.07MLD)</td><td>--</td><td>3</td></tr>
</table>
ಯೋಜನೆಯ ಅನುಷ್ಠಾನದಲ್ಲಿ ಉಂಟಾಗಿರುವ ವಿಳಂಬ;<br>ಕುಂದಾಪುರ ಪಟ್ಟಣದ ಒಳಚರಂಡಿ ಯೋಜನೆಯಡಿ ವಿವಿಧ ಘಟಕಗಳನ್ನು ನಿರ್ಮಿಸಲು ಗುರುತಿಸಲಾದ ಜಾಗಗಳನ್ನು ಪುರಸಭೆಯು ಯೋಜನೆ ಅನುಮೋದನೆಗೊಂಡ 6 ತಿಂಗಳುಗಳೊಳಗೆ ಹಸ್ತಾಂತರಿಸುವುದಾಗಿ ಭರವಸೆ ನೀಡಿದ್ದು, ಅದರನ್ವಯ ಕಾಮಗಾರಿ ಗುತ್ತಿಗೆಯನ್ನು ನವೆಂಬರ್-2015ರಲ್ಲಿ ವಹಿಸಲಾಗಿರುತ್ತದೆ. ಗುತ್ತಿಗೆ ಕರಾರಿನನ್ವಯ ಕಾಮಗಾರಿಯನ್ನು ನವೆಂಬರ್-2017ರೊಳಾಗಾಗಿ ಪೂರ್ಣಗೊಳಿಸಬೇಕಾಗಿತ್ತು.<br>ಸದರಿ ಗುತ್ತಿಗೆಯಡಿ, ಪಟ್ಟಣದಲ್ಲಿ 31.50 ಕಿ.ಮೀ ಉದ್ದದ ಆಂತರಿಕ ಒಳಚರಂಡಿ ಕೊಳವೆ ಮಾರ್ಗ, 1160 ಮೆಷಿನ್ ಹೋಲ್ ಗಳು ಹಾಗೂ 1650 ಗೃಹ ಸಂಪರ್ಕಗಳನ್ನು ಅಳವಡಿಸಲಾಗಿದ್ದು, ಇದನ್ನು ಚಾಲನೆಗೊಳಿಸಲು 5 ವೆಟ್‌ವೆಲ್ ಗಳು ಹಾಗೂ ಬಳಸಿದ ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಿಸುವುದು ಅತ್ಯವಶ್ಯಕವಾಗಿರುತ್ತದೆ. ಆದರೆ, ವಿವಿಧ ಘಟಕಗಳಿಗೆ ಅಗತ್ಯವಿದ್ದ ಜಾಗಗಳನ್ನು ಪುರಸಭೆ ವತಿಯಿಂದ ಮಂಡಳಿಗೆ ಹಸ್ತಾಂತರಿಸುವಲ್ಲಿ ಕೆಳಗಿನ ಕಾರಣಗಳಿಂದ</td></tr>
</table>

ಗಣನೀಯವಾಗಿ ವಿಳಂಬವಾಗಿರುವುದರಿಂದ, ಎಲ್ಲಾ ಕಾಮಗಾರಿಗಳು ಸಂಪೂರ್ಣವಾಗಿರುವುದಿಲ್ಲ:

1. 5 ವೆಟ್ ವೆಲ್ ಗಳ ಪೈಕಿ 4 ವೆಟ್ ವೆಲ್ ಗಳ ಜಮೀನುಗಳನ್ನು ಡಿಸೆಂಬರ್-2021ರಲ್ಲಿ ಪುರಸಭೆಯಿಂದ ಹಸ್ತಾಂತರಿಸಲಾಗಿರುತ್ತದೆ.
2. ವಲಯ-7ರ ಮುಖ್ಯ ವೆಟ್ ವೆಲ್ ನ ಜಮೀನನ್ನು ಸೆಪ್ಟೆಂಬರ್-2024ರಲ್ಲಿ ಪುರಸಭೆಯಿಂದ ಹಸ್ತಾಂತರಿಸಲಾಗಿರುತ್ತದೆ.
3. ಬಳಸಿದ ನೀರು ಶುದ್ಧೀಕರಣ ಘಟಕಕ್ಕೆ ಸಂಪರ್ಕ ರಸ್ತೆಯನ್ನು ನಿರ್ಮಿಸಲು ಜಮೀನನ್ನು ಸೆಪ್ಟೆಂಬರ್-2024ರಲ್ಲಿ ಪುರಸಭೆಯಿಂದ ಹಸ್ತಾಂತರಿಸಲಾಗಿರುತ್ತದೆ.
4. ಯೋಜನೆಯ ಅನುಷ್ಠಾನಕ್ಕೆ ಅವಶ್ಯವಿರುವ ಜಮೀನುಗಳನ್ನು ಹಸ್ತಾಂತರಿಸುವಲ್ಲಿ ವಿಳಂಬವಾದ ಕಾರಣದಿಂದಾಗಿ, ಬಾಕಿ ಕಾಮಗಾರಿಗಳನ್ನು 9 ವರ್ಷಗಳ ಹಳೆಯ ಗುತ್ತಿಗೆಯ ದರಗಳಲ್ಲಿ ಕೈಗೊಳ್ಳಲು ಗುತ್ತಿಗೆದಾರರು ನಿರಾಕರಿಸಿರುವುದರಿಂದ, ಗುತ್ತಿಗೆಯನ್ನು ಯಥಾಸ್ಥಿತಿಯಲ್ಲಿ ಅಂತ್ಯಗೊಳಿಸಲು 306ನೇ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಈ ಹಿನ್ನಲೆಯಲ್ಲಿ ಯೋಜನೆಯನ್ನು ಚಾಲನೆಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ತರಲು ಸಾಧ್ಯವಾಗಿರುವುದಿಲ್ಲ. ಯೋಜನೆಯಡಿ ಬಾಕಿ ಉಳಿದ ಕಾಮಗಾರಿಗಳನ್ನು ಕೈಗೊಳ್ಳಲು ಮಂಡಳಿ ವತಿಯಿಂದ ಸಲ್ಲಿಸಲಾದ ರೂ.4681.00 ಲಕ್ಷಗಳ ಮೊತ್ತದ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ, ರೂ.13.63 ಕೋಟಿ ಮೊತ್ತದಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಹೆಚ್ಚುವರಿಯಾಗಿ ಅವಶ್ಯವಿರುವ ಅನುದಾನವನ್ನು ಪುರಸಭೆ ವತಿಯಿಂದ ಹಂತ ಹಂತವಾಗಿ ಭರಿಸಲು ಸೂಚಿಸಲಾಗಿರುತ್ತದೆ.

ಮುಂದುವರೆದು, ಯೋಜನೆಯನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲು ಈ ಕೆಳಕಂಡ ಯೋಜನೆಗಳಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಲಭ್ಯವಿರುತ್ತದೆ:

| ಕ್ರ. ಸಂ. | ಯೋಜನೆ | ಕಾಮಗಾರಿ ವಿವರ | ಅನುಷ್ಠಾನ ಸಂಸ್ಥೆ | ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|
| 1. | SBM 2.0 | 4.65 MLD ಸಾಮರ್ಥ್ಯದ ಬಳಸಿದ ನೀರು ಶುದ್ಧೀಕರಣ ಘಟಕ | KUIDFC (ನೋಡಲ್ ಸಂಸ್ಥೆ) | 1550.42 |
| 2. | UIDSSMT (ಉಳಿಕೆ ಮೊತ್ತ) | ವಲಯ-5 ಮತ್ತು 7ರಲ್ಲಿ, 2 ಸಂಖ್ಯೆ ವೆಟ್ ವೆಲ್ ಮತ್ತು ಬಾಕಿ ಒಳಚರಂಡಿ ಜಾಲ | ಕ.ನ.ನೀ.ಸ ಮತ್ತು ಒ.ಚ ಮಂಡಳಿ | 1363.00 |
| 3. | SBM (ನಗರ) - 2.0 UWM) | Interception & Diversion ಕಾಮಗಾರಿ – 7.00 ಕಿ.ಮೀ | ಪೌರಾಡಳಿತ ನಿರ್ದೇಶನಾಲಯ | 712.10 |
| 4. | Urban Challenge Funds | Interception & Diversion ಕಾಮಗಾರಿ ಹೊರತುಪಡಿಸಿ, ವಲಯ-1, 2, 3, 4 ಮತ್ತು 6 ರಲ್ಲಿ ಬಾಕಿ ಉಳಿಯುವ ಕಾಮಗಾರಿಗಳು | ಕುಂದಾಪುರ ಪುರಸಭೆ | 572.00 (ಕೇಂದ್ರದ ಪಾಲು– ಶೇ. 2 |

| | | |
|---|---|---|
| | | ಸದರಿ ಯೋಜನೆಯನ್ನು ಚಾಲನಗೊಳಿಸಲು ಈ ಕೆಳಕಂಡಂತೆ ಕ್ರಮ ವಹಿಸಲಾಗುವುದು:<br><br>1. KUIDFC (ನೋಡಲ್ ಸಂಸ್ಥೆ) ವತಿಯಿಂದ SBM 2.0 ಯೋಜನೆಯಡಿ ರೂ.1550.42 ಲಕ್ಷಗಳ ಅಂದಾಜು ಮೊತ್ತದಲ್ಲಿ 4.65 MLD ಸಾಮರ್ಥ್ಯದ ಬಳಸಿದ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಲಾಗುವುದು.<br>2. UIDSSMT ಯೋಜನೆಯಡಿ ಲಭ್ಯವಿರುವ ರೂ.13.63 ಕೋಟಿ ಮೊತ್ತದಲ್ಲಿ ವಲಯ-5 ಮತ್ತು 7 ರಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಕೈಗೊಂಡು SBM 2.0 ಯೋಜನೆಯಡಿ ನಿರ್ಮಿಸಲಾಗುವ ಬಳಸಿದ ನೀರು ಶುದ್ಧೀಕರಣ ಘಟಕದಲ್ಲಿ ಸಂಸ್ಕರಿಸಲು ಯೋಜಿಸಲಾಗಿದೆ.<br>3. ಸರ್ಕಾರದ ಆದೇಶ ಸಂಖ್ಯೆ: UDD 229 CSS 2021 ದಿನಾಂಕ 12-08-2026ರಲ್ಲಿ ಕುಂದಾಪುರ ಪಟ್ಟಣಕ್ಕೆ 7.00 ಕಿ.ಮೀ. ಉದ್ದದ Interception & Diversion ಕಾಮಗಾರಿಗಳ ರೂ.712.10 ಲಕ್ಷಗಳ ಡಿ.ಪಿ.ಆರ್ ಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br>4. ಮುಖ್ಯಾಧಿಕಾರಿಗಳು, ಕುಂದಾಪುರ ಪುರಸಭೆ ಇವರು, ದಿನಾಂಕ: 05.06.2026ರ ಪತ್ರದಲ್ಲಿ, Urban Challenge ನಿಧಿ ಅಡಿಯಲ್ಲಿ ಕೇಂದ್ರ ಸರ್ಕಾರದ ವಂತಿಗೆಯಾಗಿ ಶೇ.25% ರಂತೆ ರೂ.5.72 ಕೋಟಿಗಳನ್ನು ಹಂಚಿಕೆ ಮಾಡಿದ್ದು, ಪುರಸಭೆಯ ವ್ಯಾಪ್ತಿಯಲ್ಲಿ ಬಾಕಿ ಇರುವ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ಮಾರ್ಗಸೂಚಿಯನ್ವಯ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮಂಡಳಿಯನ್ನು ಕೋರಿರುತ್ತಾರೆ. ಸದರಿ ಅನುದಾನದಲ್ಲಿ, ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಕೈಗೊಳ್ಳುವ Interception & Diversion ಕಾಮಗಾರಿ ಹೊರತುಪಡಿಸಿ, ವಲಯ-1, 2, 3, 4 ಮತ್ತು 6 ರಲ್ಲಿ ಬಾಕಿ ಕಾಮಗಾರಿಗಳನ್ನು ಕೈಗೊಳ್ಳಲು, ಹೆಚ್ಚುವರಿಯಾಗಿ ತಗಲುವ ಮೊತ್ತಕ್ಕೆ ಮಂಡಳಿಯ ವತಿಯಿಂದ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ ನಂತರ ಅನುದಾನ ಲಭ್ಯತೆಯನ್ನಾಧರಿಸಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. |

ನಅಇ 123 ಯುಎಂಎಸ್ 2026

**( ಡಾ.ಯತೀಂದ್ರ ಸಿದ್ದರಾಮಯ್ಯ )**

ನಗರಾಭಿವೃದ್ಧಿ ಸಚಿವರು